# ಕೈ ಮೀರಿ ಹೋದ ಮಾತಿಗೆ ಹುಡುಕಬಾರದು

(Version – 1)

1. **Ref.:** Dasara Padagalu – Purandara Dasara Keerthane, Samyukta Samputa, Edited by Shri Pavanje Gururao, Sriman Madhwa Siddantha Granthalaya, Udupi
2. **Ref.:** Purandara Sahitya Darshana, Samputa 3, Samaja Darshana edited by Prof. S.K. Ramachandra Rao
3. **Note:** Lyrics in both the above references are similar except few wordings, which are marked in grey highlights.
4. **Note:** Ankita here is Purandara Vittala.
5. **Note:** There is one more song - kai mIri hOda mAtige maruga bAradu.  In this Ankita is Guru Purandara viTTala.  Lyrics are also different and is separately listed as Version – 2.

ರಾಗ:  ಸೌರಾಷ್ಟ್ರ     ತಾಳ:  ಅಟ್ಟ

ಕೈ ಮೀರಿ ಹೋದ ಮಾತಿಗೆ ಹುಡುಕಬಾರದು  ॥ ಪ ॥

ಮಾತು ಕೇಳದ ಮಕ್ಕಳ ಹೆಸರು ತೆಗೆಯಬಾರದು, ತನ್ನ
ಪ್ರೀತಿ ಇಲ್ಲದ ಪತಿಯ ಕಂಡು ಹಿಗ್ಗಬಾರದು  ॥ ೧ ॥

ಜಾರತ್ವ ಮಾಡೊ ಪತ್ನಿಯ ಕೂಡಿ ಆಳಬಾರದು
ವೈರತ್ವ ಮಾಳ್ಪವರ ಸೊಲ್ಲು ಕೇಳಬಾರದು  ॥ ೨ ॥

ದುಷ್ಟ ಕರ್ಕಶಿ ಸ್ತ್ರೀಯಳ ಹೆಸರು ತೆಗೆಯಬಾರದು
ಹತ್ತು ಮಂದಿಗಂಜದವನ ಸ್ನೇಹಿಸಬಾರದು  ॥ ೩ ॥

ಪಂಕ್ತ್ಯಗೆ (ಪಂಗ್ತಿಯಲ್ಲಿ) ಪರ-ಪಂಕ್ತಿಯನ್ನು ಮಾಡಬಾರದು
ಮಂಕು ಜೀವನಾಗಿ ಮುಕ್ತಿ ಬೇಡಬಾರದು  ॥ ೪ ॥

ಆಚಾರ ಹೀನನ ಮನೆಯೊಳೂಟ ಮಾಡಬಾರದು
ವಿಚಾರ ಇಲ್ಲದ ಸಭೆಯೊಳು ಕೂಡ್ರುಬಾರದು  ॥ ೫ ॥

ಪರ-ಪುರುಷರಿದ್ದೆಡೆಯೊಳೊಬ್ಬಳಿರಲುಬಾರದು, ಸ್ವಾಮಿ
ಪುರಂದರ ವಿಠ್ಠಲನ ಧ್ಯಾನ ಮರೆಯಬಾರದು  ॥ ೬ ॥

**ಕಠಿಣ ಪದಗಳ ಅರ್ಥ ಮತ್ತು ಟಿಪ್ಪಣಿ:**

ಮಾನವನ ನಡವಳಿಕೆಗಳು ಯಾವ ಜಾಡನ್ನು ಹಿಡಿಯಬಾರದೆಂಬುದನ್ನು ನಿಷೇಧ ರೂಪದಲ್ಲಿ ಪುರಂದರ ದಾಸರು ದಿಗ್ದರ್ಶಿಸಿದ್ದಾರೆ. ಕುಟುಂಬದಲ್ಲಿ ಗೃಹ ಸೌಖ್ಯವನ್ನೂ ಹೊರಗೆ ಸಮಾನ ಸೌಖ್ಯವನ್ನೂ ಕಾಪಾಡಲು ನಾವೇ ಇಂಥ ಕಟ್ಟುಪಾಡುಗಳನ್ನು ಹಾಕಿಕೊಳ್ಳುವುದು ವಿಹಿತ. 'ಮಂಕು ಜೀವನಾಗಿ ಮುಕ್ತಿ ಬೇಡಬಾರದು' ಎಂಬ ಮಾತಂತೂ ದಾಸರ ಕ್ರಿಯಾಪೂರ್ಣ ಚಿಂತನಶೀಲತೆಯನ್ನು ವ್ಯಕ್ತಪಡಿಸುತ್ತದೆ.

**Classification:** Keerthane
**Ankita:** purandara vittala
**Location:** NA
**Category:** Hitanudi, Jeevana Sutra
**Sub-Category:** makkalu, pati, priti, patni, shatru, hennu, mitra, jiva, mukti, mane, oota, dhyAna,
**Pravachana:** NA
**Explanation:** NA